# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 35/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಅಕ್ಕುಲಾ ರೆಡ್ಡಿ | ಫ್ರಾಸಾಃ | 06 |
| **ತಂದೆಯ ಹೆಸರುಃ** | ಅಂಜಿನಪ್ಪ | ಚಾಸಾಃ | 07 |
| **ವಯಸ್ಸುಃ** | 48 | ಪ್ರಮಾಣ ವಚನ ಭೋದಿಸಿದ ದಿನಾಂಕ: | 20-08-2025 |
| **ಉದ್ಯೋಗಃ** | ರೈತ | | |
| **ವಾಸ ಸ್ಥಳಃ** | ವೈ ಗೊಲ್ಲಹಳ್ಳಿ | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ-*1* ಮತ್ತು ಚಾಸಾ-*2* ಗೊತ್ತಿಲ್ಲ*.* ಆರೋಪಿತರು ಗೊತ್ತು*.* ಅಗಸ್ಟ್ *2022* ರಲ್ಲಿ ಸಂಜೆ *07.30* ಸುಮಾರಿಗೆ ನಾನು ನನ್ನ ಕೊಟ್ಟಿಗೆ ಮನೆಯ ಬಳಿ ಇದ್ದಾಗ ಸೀನಪ್ಪನ ಚಿಲ್ಲರೆ ಅಂಗಡಿಯ ಬಳಿ ಗಲಾಟೆ ನಡೆಯುತ್ತಿತ್ತು*.* ಚಾಸಾ-*1* ರವರು ಅಂಗಡಿಗೆ ಟೀ ಕುಡಿಯಲು ಬಂದಿದ್ದರು*.* ಆರೋಪಿತರೆಲ್ಲರೂ ಅಲ್ಲಿಗೆ ಗುಂಪು ಕಟ್ಟಿಕೊಂಡು ಬಂದು , ಕಟ್ಟಿಗೆಯಿಂದ ಚಾಸಾ-*1* ರವರ ಮೇಲೆ ಹಲ್ಲೆ ಮಾಡಿದ್ದರು*.* ಕತ್ತಲಾಗಿದ್ದರಿಂದ ನನಗೆ ಗಮನಿಸಲು ಆಗಲಿಲ್ಲ*.* ಚಾಸಾ-*1* ರವರ ತಲೆ ಹಾಗೂ ಕೈ ಮೇಲೆ ಗಾಯಗಳಾಗಿದ್ದವು *.* ಹಲ್ಲೆ ಮಾಡಿ ಆರೋತಪಿರು ಪರಾರಿಯಾದ ನಂತರ ನಾನು ಚಾಸಾ-*1* ರವರನ್ನು ಆ್ಯಂಬುಲೆನ್ಸ್ ಮೂಲಕ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದೆ*.* ಅಲ್ಲಿಂದ ವೈದ್ಯರ ಸೂಚನೆಯ ಮೇರೆಗೆ ಕೋಲಾರದ ಎಸ್*.*ಎನ್*.* ಆರ್ ಆಸ್ಪತ್ರೆಗೆ ಸೇರಿಸಿದ್ದೇವು*.*

ಯಾವುದೋ ಟೆಂಪೋ ವಿಚಾರವಾಗಿ ಹಲ್ಲೆ ಮಾಡಿದ್ದರೆಂದು ತಿಳಿದು ಬಂತು. ಮು.ಮಾ.*03* ಮತ್ತು ಮು.ಮಾ.*04* ನ್ನು ಈಗ ನೋಡುತ್ತಿದ್ದು , ಆ ದಿನ ಆರೋಪಿತರು ಕತ್ತಲಾಗಿದ್ದರಿಂದ ಆಯುಧಗಳನ್ನು ಹಿಡಿದಿದ್ದು , ಯಾರು ಯಾವ ಆಯುಧವನ್ನು ಹಿಡಿದಿದ್ದರು ಎಂದು ನನಗೆ ಗಮನಿಸಲು ಆಗಲಿಲ್ಲ. ನಿಪಿ-*2* ಮಹಜರ್ ನಲ್ಲಿರುವ ಸಹಿ ನನ್ನದು. ಅದನ್ನು ಊರಿನಲ್ಲಿ ಮಾಡಿದ್ದೇನೆ. ಆ ಕಾಲದಲ್ಲಿ ನಾನು ಈಗ ನನಗೆ ತೋರಿಸಿದ್ದ ಮು.ಮಾ.*01* ರಿಂದ *4* ಮತ್ತು ಮು.ಮಾ.*06* ಮತ್ತು ಮು.ಮಾ.*07* ನ್ನು ನೋಡಿಲ್ಲ. ಈಗ ನನಗೆ ತೋರಿಸಿದ್ದ ಮು.ಮಾ.*05* ಚಾಸಾ-*1* ರವರು ಘಟನಾ ಸಮಯದಲ್ಲಿ ಧರಿಸಿದ್ದು ಅದನ್ನು ಪೋಲಿಸರಿಗೆ ಕೊಟ್ಟಿದ್ದರು. ಈಗ ನೋಡುತ್ತಿರುವ ನಿಪಿ-*5* ಮಹಜರ್ ನಲ್ಲಿರುವ ಸಹಿ ನನ್ನದು. ನಿಪಿ-*5* ಎ ನನ್ನ ಸಹಿ. ಅದನ್ನು ಸಹ ಊರಿನಲ್ಲಿ ಮಾಡಿದ್ದೇನೆ. ಆ ಸಮಯದಲ್ಲಿ ಮು.ಮಾ.*05* ನೋಡಲ್ಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

ದಿ.26.08.2022 ರಂದು 8.00 ಸಮಯದಲ್ಲಿ ಆರೋಪಿತರು ಮು.ಮಾ.01 ರಿಂದ ಮು.ಮಾ .04 ಮತ್ತು 6 , 7 ಆಯುಧಗಳನ್ನು ಹಿಡಿದುಕೊಂಡು ಚಾಸಾ-1 ರವರ ಮೇಲೆ ಹಲ್ಲೆ ಮಾಡಿ ತೀವ್ರವಾದ ಗಾಯಗೊಳಿಸಿದ್ದು , ನಂತರ ನಾನು ಆತನನ್ನು ಆಸ್ಪತ್ರೆಗೆ ಸೇರಿಸಿ , ಚಿಕಿತ್ಸೆ ಕೊಡಿಸಿ , ಮಾರನೇಯ ದಿನ ಪೋಲಿಸರು ನಿಪಿ-2 ಸ್ಥಳ ಮಹಜರ್ ಮಾಡುವಾಗ ಮು.ಮಾ.01 ರಿಂದ 4, 6 ಮತ್ತು 7 ನ್ನು ಅಮಾನತುಪಡಿಸಿಕೊಂಡಾಗ ಪಂಚನಾಗಿ ಸಹಿ ಮಾಡಿ ನಂತರ

29.08.2022 ರಂದು ಗಾಯಾಳು ಧರಿಸಿದ್ದ ಮು.ಮಾ.05 ಶರ್ಟ್ ನ್ನು ಪೋಲಿಸ್ ಠಾಣೆಯಲ್ಲಿ ಹಾಜರುಪಡಿಸಿದಾಗ ನಿಪಿ-5 ಮಹಜರ್ ಗೆ ಪಂಚನಾಗಿ ಸಹಿ ಮಾಡಿ ಹಾಗೂ ದಿ.28.08.2022 ರಂದು ನಮ್ಮ ಗ್ರಾಮದ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ್ದ 8 ದ್ವಿಚಕ್ರ ವಾಹನಗಳನ್ನು ಅಮಾನತುಪಡಿಸಿಕೊಂಡಾಗ ನಿಪಿ-6 ಮಹಜರ್ ಗೆ ನಿಪಿ-6 ಎ ರಂತೆ ಸಹಿ ಮಾಡಿ ಪೋಲಿಸರ ಮುಂದೆ ನಾನು -------ಗುರುತಿಸುತ್ತೇನೆ ಎಂದು ನಿಪಿ.7 ರಂತೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರಿಂದ ಪಾಟೀ ಸವಾಲು ಏನು ಇರುವುದಿಲ್ಲ .**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ20.08.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.